ಕೆರೆ ಏರಿಯ ದುರಸ್ಥಿ

436 (5963); ಶ್ರೀ ಸುಧಾಕರ ಲಾಲ್ ಪಿ. ಆರ್. (ಕೊರಟಗೆರೆ)

ಅ) ಕೊರಟಗೆರೆ ವಿಧಾನಸಭಾ ಕ್ಷೇತ್ರದ ಅಕ್ಕಿರಾಂಪುರ ಕೆರೆಯ ಏರಿಯ ಲೋಕೋಪಯೋಗಿ ರಸ್ತೆಯು ವಾಹನಗಳ ಸಂಚಾರಕ್ಕೆ ಅಪಾಯಕಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವುದೇ ಕ್ಷಣದಲ್ಲಾದರೂ ದುರಂತ ಸಂಭವಿಸುವ ಈ ಕೆರೆಯ ರಸ್ತೆಯನ್ನು ಪುನರ್ ನಿರ್ಮಾಣ ಮಾಡಲು ಸರ್ಕಾರ ಗಂಭೀರ ಚಿಂನೆ ನಡೆಸಿದೆಯೇ;

ಇ) ಹಾಗಿದ್ದಲ್ಲಿ, ಈ ಯೋಜನೆಯ್ನು ಕೈಗೆತ್ತಿಕೊಳ್ಳುವುದು, ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು; (ಸಂಪೂರ್ಣ ಮಾಹಿತಿ ನೀಡುವುದು);

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕೊರಟಗೆರೆ ವಿಧಾನಸಭಾ ಕ್ಷೇತ್ರದ ಕೊರಟಗೆರೆ ಬೈಚಾಪುರ ರಸ್ತೆಯು ಲೋಕೋಪಯೋಗಿ ಇಲಾಖೆಗೆ ಸೇರಿದ ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಈ ರಸ್ತೆಯು ಒಟ್ಟು 12.80 ಕಿ.ಮೀ. ಉದ್ದವಿರುತ್ತದೆ. ಸರಪಳಿ 9.50 ರಿಂದ 10.60 ಕಿ.ಮೀ.ಮರೆಗೆ ಅಕ್ಕಿರಾಂಪುರ ಕೆರೆ ಏರಿಯ ಮೇಲೆ ರಸ್ತೆಯು ಹಾದು ಹೋಗುತ್ತದೆ. ಹಾಗೂ ಕೆರೆ ಏರಿಯ ಅಗಲ ಸರಾಸರಿ 6.50 ಮೀ. ಗಳಷ್ಟಿದ್ದು, 5.50 ಮೀ. ಅಗಲಕ್ಕೆ ಡಾಂಬರೀಕರಣ ಮಾಡಲಾಗಿರುತ್ತದೆ.

ಕೊರಟಗೆರೆ ತಾಲ್ಲೂಕು ಕೊರಟಗೆರೆ ಬೈಚಾಪುರ ರಸ್ತೆಯ ಅಕ್ಕಿರಾಂಪುರ ಕೆರೆ ಏರಿಯ ಮೇಲೆ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ ರಸ್ತೆಯು ಹಾಳಾಗಿರುತ್ತದೆ. ಕೆರೆಯ ಏರಿಯ ಮೇಲೆ ರಸ್ತೆ ಅಗಲಪಡಿಸಿಕೊಂಡು ರಸ್ತೆ ಪುನರ್ ನಿರ್ಮಾಣ ಮಾಡಲು ಪರಿಶೀಲಿಸಲಾಗುವುದು.

ಅಧ್ಯಕ್ಷರು: ಶ್ರೀ ಪ್ರಭು ಬಿ. ಚೌವ್ಹಾಣ್, ಶ್ರೀ ಎನ್. ಹೆಚ್. ಕೋನರೆಡ್ಡಿ. ಶ್ರೀ ಜೆ. ಟಿ. ಪಾಟೀಲ್ ತಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ಶ್ರೀ ಕೆ. ರಾಘವೇಂದ್ರ ಬಸವರಾಜ್ ಹಿಟ್ನಾಳ್ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: House is not in order.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರಕ್ಕೆ ನಾಚಿಕೆ ಬರಬೇಕು.

(ಗೊಂದಲ)

ಅಧ್ಯಕ್ಷರು: ಶ್ರೀ ಕೆ. ಎಸ್. ಪುಟ್ಟಣ್ಣಯ್ಯನವರು ಕೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರಕ್ಕೆ ನಾಚಿಕೆ ಬರಬೇಕು. House order ನಲ್ಲಿಲ್ಲ. ಇಂತಹ ಸಂದರ್ಭದಲ್ಲಿ ಸದನ ನಡೆಸುವಂತಹ ಒಂದು ಕೆಟ್ಟ ಸಂಪ್ರದಾಯ ಇದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರಕ್ಕೆ ನಾಚಿಕೆ ಬರಬೇಕು. ಮಾನ್ಯ ಜಯಚಂದ್ರ ರವರೇ ನೀವು ಕಾನೂನು ಸಚಿವರಾಗಿದ್ದಾಗ, ಸಂಸದೀಯ ಸಚಿವರಿದ್ದಾಗ, ಈ ರೀತಿ ಸದನ ನಡೆಸುವುದಕ್ಕೆ ನಾಚಿಕೆ ಬರಬೇಕು.

(ಗೊಂದಲ)